# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,
ವಾರ್ಡ್ ನಂ.40, ದೊಡ್ಡಬಿದರಕಲ್ಲು, ಕರಿಹೋಬನಹಳ್ಳಿ, ಬೆಂಗಳೂರು-5600 58.

---

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.40ರಲ್ಲಿ ದಿನಾಂಕ: 17.10.2020 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.**

ಶ್ರೀ ದೊಡ್ಡರಾಣಯ್ಯ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.

1. ಶ್ರೀ ಜಿ.ನಾಗಭೂಷಣ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
2. ಶ್ರೀ ಡಿ.ಎಂ.ರಮೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು.
3. ಶ್ರೀ ರಮೇಶ್, ಪಶು ವೈದ್ಯರು.
4. ಶ್ರೀ ಜಿ.ಗೋವಿಂದರಾಜು, ಅರಣ್ಯ ಇಲಾಖೆ.
5. ಶ್ರೀ ಅಜಿತ್ ಕುಮಾರ್, ಬ್ಯಾಡರಹಳ್ಳಿ ಪೋಲೀಸ್ ಠಾಣೆ.
6. ಶ್ರೀ ಆನಂದ್, ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ.
7. ಶ್ರೀ ವಿ.ವೆಂಕಟೇಶನ್, ಸಹಾಯಕ ವ್ಯವಸ್ಥಾಪಕರು, ಎಸ್.ಡಬ್ಲ್ಯೂ.ಎಂ.
8. ಶ್ರೀ ಎಂ.ಅಮರನಾಥ್, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
9. ಮೇಘನಾ.ಬಿ.ಕೆ, ಸಹಾಯಕ ಅಭಿಯಂತರರು, ಕೆರೆಗಳ ವಿಭಾಗ, ರಾ.ರಾ.ನಗರ.ವಲಯ.
10. 

**ಈ ಕೆಳಕಂಡ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರಾಗಿರುತ್ತಾರೆ.**

ಶ್ರೀ ಡಿ.ಎಂ.ರಮೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು.

1. ಶ್ರೀ ರಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್.
2. ಶ್ರೀ ರಮೇಶ್, ಸಹ ಕಂದಾಯ ಅಧಿಕಾರಿ (ಚುನಾವಣೆ ಕೆಲಸದ ನಿಮಿತ್ತ)
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಇಲಾಖೆ.
4. ತೋಟಗಾರಿಕೆ ಅಧೀಕ್ಷಕರು, ರಾ.ರಾ.ನಗರ ವಲಯ
5. ಪೊಲೀಸ್ ಇನ್ಸ್‌ಪೆಕ್ಟರ್, ಪೀಣ್ಯ ಪೊಲೀಸ್ ಠಾಣೆ.
6. 

ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು. ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ,

1) ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸಿದ ವಿಚಾರ.

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡ ಕ್ರಮಕೈಗೊಳ್ಳಲು ಹಿರಿಯ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಮನೆ ಮನೆಗಳಿಂದ ಹಸಿಕಸ, ಒಣಕಸ ಮತ್ತು ಸ್ಯಾನಿಟರಿ ತ್ಯಾಜ್ಯಗಳನ್ನು ಬೇರ್ಪಡಿಸಿ ಕೊಡುವಂತೆ ಜನರಲ್ಲಿ ಅರಿವು ಮೂಡಿಸುವಂತೆ ನೋಡಲ್ ಅಧಿಕಾರಿಯವರು ಸದಸ್ಯರುಗಳಿಗೆ ತಿಳಿಸಿದರು.
2. ರಸ್ತೆ ಬದಿ ಯಲ್ಲಿ ಕಸ ಹಾಕುವುದನ್ನು ತಡೆಯಲು ಕಸದ ಪಾಯಿಂಟ್‌ಗಳಲ್ಲಿ ಮಾರ್ಷಲ್‌ಗಳನ್ನು ನೇಮಿಸಿ ಕಸ ಹಾಕಿದವರ ಮೇಲೆ ದಂಡವನ್ನು ವಿಧಿಸಿ ಕ್ರಮಕೈಗೊಳ್ಳುವುದು ಹಾಗೂ ಸಿ.ಸಿ ಕ್ಯಾಮೆರಾ ಅಳವಡಿಸುವುದು.
3. ಕಸದ ಗಾಡಿಯಲ್ಲಿ ಹೆಲ್ಪರ್‌ಗಳ ಕೊರತೆ ಇದ್ದು, ಹೆಚ್ಚಿನ ಹೆಲ್ಪರ್‌ಗಳನ್ನು ನೇಮಿಸಲು ಹಿಂದಿನ ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದ್ದರು. ಆದರೆ ಹೆಲ್ಪರ್‌ಗಳಿಗೆ ಸರಿಯಾಗಿ ಸಂಬಳ ಬರದ ಕಾರಣ ಹೆಲ್ಪರ್‌ಗಳು ಬರುತ್ತಿಲ್ಲವೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು.
4. ವಾರ್ಡ್‌ನಲ್ಲಿ ಹಂದಿ ಸಾಕಾಣಿಕೆ ಹೆಚ್ಚಾಗಿದ್ದು, ಹಂದಿಗಳು ಹೊರಗೆ ಬರದಂತೆ ನೋಡಿಕೊಳ್ಳಲು ಸಾಕಾಣಿಕೆದಾರರಿಗೆ ನೋಟೀಸ್ ನೀಡುವಂತೆ ಪಶು ವೈದ್ಯರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.
5. ವಾರ್ಡ್ ವ್ಯಾಪ್ತಿಯಲ್ಲಿ ಗಾಡಿಗಳು ಹೋಗದೆ ಕಸ ನಿರ್ವಹಣೆಗೆ ಕಷ್ಟಕರವಾಗಿರುವ ಸ್ಥಳಗಳಲ್ಲಿ ಕಸದ ಬಿನ್‌ಗಳನ್ನು ಒದಗಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
6. ವಾರ್ಡ್ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಣ ಮಾಡಲು ಜನರಲ್ಲಿ ಜಾಗೃತಿ ಮೂಡಿಸುವಂತೆ ಸೂಚಿಸಿದರು

3. ಕಸದ ಗಾಡಿಯಲ್ಲಿ ಹೆಲ್ಪರ್‌ಗಳ ಕೊರತೆ ಇದ್ದು, ಹೆಚ್ಚಿನ ಹೆಲ್ಪರ್‌ಗಳನ್ನು ನೇಮಿಸಲು ಹಿಂದಿನ ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದ್ದರು. ಆದರೆ ಹೆಲ್ಪರ್‌ಗಳಿಗೆ ಸರಿಯಾಗಿ ಸಂಬಳ ಬರದ ಕಾರಣ ಹೆಲ್ಪರ್‌ಗಳು ಬರುತ್ತಿಲ್ಲವೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು.

4. ವಾರ್ಡ್‌ನಲ್ಲಿ ಹಂದಿ ಸಾಕಾಣಿಕೆ ಹೆಚ್ಚಾಗಿದ್ದು, ಹಂದಿಗಳು ಹೊರಗೆ ಬರದಂತೆ ನೋಡಿಕೊಳ್ಳಲು ಸಾಕಾಣಿಕೆದಾರರಿಗೆ ನೋಟೀಸ್ ನೀಡುವಂತೆ ಪಶು ವೈದ್ಯರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

5. ವಾರ್ಡ್ ವ್ಯಾಪ್ತಿಯಲ್ಲಿ ಗಾಡಿಗಳು ಹೋಗದ ಕಸ ನಿರ್ವಹಣೆಗೆ ಕಷ್ಟಕರವಾಗಿರುವ ಸ್ಥಳಗಳಲ್ಲಿ ಕಸದ ಬಿನ್‌ಗಳನ್ನು ಒದಗಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

6. ವಾರ್ಡ್ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಣ ಮಾಡಲು ಜನರಲ್ಲಿ ಜಾಗೃತಿ ಮೂಡಿಸುವಂತೆ ಸೂಚಿಸಿದರು

**2) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.**

1. ವಾರ್ಡ್ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆಗಳ ಗುಂಡಿಯನ್ನು ಸಾರ್ವಜನಿಕರು ಓಡಾಡಲು ಅನುಕೂಲವಾಗುವಂತೆ ಅತೀ ಜರೂರಾಗಿ ಮುಚ್ಚುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

**3) ವಾರ್ಡ್ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಾಮಗಾರಿಗಳಾದ ಕುಡಿಯುವ ನೀರು ಮತ್ತು ಒಳಚರಂಡಿಯ ಬಗ್ಗೆ ಚರ್ಚಿಸುವ ವಿಚಾರ.**

1. ವಾರ್ಡ್ ವ್ಯಾಪ್ತಿಯಲ್ಲಿನ ಪಿಳ್ಳಣ್ಣ ಬಡಾವಣೆಯಲ್ಲಿ ಒಳಚರಂಡಿಯ ಸಬ್‌ಲೈನ್ ಮಾಡದೆ ಸ್ಯಾನಿಟರಿ ಹುಕ್ಕಿಹರಿಯುತ್ತಿದ್ದು, ಅತೀ ಜರೂರಾಗಿ ಕೆಲಸವನ್ನು ಪೂರ್ಣಗೊಳಿಸಲು ಸೂಚಿಸಲಾಯಿತು.

2. ಮುಂದಿನ ಸಭೆ ಒಳಗೆ ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ ಗುಂಡಿಗಳನ್ನು ಮುಚ್ಚಿ ಅದರ ಫೋಟೋವನ್ನು ಗ್ರೂಪ್‌ನಲ್ಲಿ ಹಾಕುವಂತೆ ನೋಡಲ್ ಅಧಿಕಾರಿಯವರು ಎಲ್&ಟಿ ರವರಿಗೆ ಸೂಚಿಸಿದರು.

3. ವಾರ್ಡ್ ವ್ಯಾಪ್ತಿಯಲ್ಲಿ ಒಳಚರಂಡಿ ಮತ್ತು ಕಾವೇರಿ ಪೈಪ್‌ಲೈನ್ ಮಾಡುತ್ತಿದ್ದು, ಇದಕ್ಕೆ ಜೆ.ಸಿ.ಬಿ ಮತ್ತು ಕೆಲಸಗಾರರ ಕೊರತೆ ಹೆಚ್ಚಾಗಿದ್ದು, ಅತೀ ಜರೂರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜೆ.ಸಿ.ಬಿ ಮತ್ತು ಕೆಲಸಗಾರರನ್ನು ತೆಗೆದುಕೊಳ್ಳುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿರವರಿಗೆ ಸೂಚಿಸಿದರು.

4. ಎಲ್&ಟಿ ರವರು ವಾರ್ಡ್ ವ್ಯಾಪ್ತಿಯಲ್ಲಿ ಕಾಮಗಾರಿಯನ್ನು ಸರಿಯಾಗಿ ಪೂರ್ಣಗೊಳಿಸದೆ ಹಾಗೂ ಸರಿಯಾಗಿ ಸ್ಪಂಧಿಸತ್ತಿಲ್ಲದಿರುವ ಬಗ್ಗೆ ಕಾರ್ಯನಿರ್ವಾಹಕ ಅಭಿಯಂತರರಿಗೆ ಕಾನೂನು ರೀತ್ಯ ಕ್ರಮಕೈಗೊಳ್ಳಲು ಪತ್ರವನ್ನು ಬರೆಯುವಂತೆ ನೋಡಲ್ ಅಧಿಕಾರಿಯವರು ಸಹಾಯಕ ಅಭಿಯಂತರರಿಗೆ ತಿಳಿಸಿದರು.

**4) ವಾರ್ಡ್ ವ್ಯಾಪ್ತಿಯಲ್ಲಿನ ಮಳೆ ನೀರುಗಾಲುವೆ ಬಗ್ಗೆ ಚರ್ಚಿಸುವ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ ರಾಜಕಾಲುವೆಗಳಿಗೆ ಪೆನ್ಸಿಂಗ್ ಅನ್ನು ಅಳವಡಿಸಿ ಬಿ.ಬಿ.ಎಂ.ಪಿ ಜಾಗವನ್ನು ಸಂರಕ್ಷಿಸುವಂತೆ ಸೂಚಿಸಲಾಯಿತು.

2. ವಾರ್ಡಿನಲ್ಲಿ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಾಣ ಮಾಡಿರುವವರ ಮೇಲೆ ನೋಟೀಸ್ ನೀಡಿ ಕಾನೂನು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

3. ವಾರ್ಡ್ ವ್ಯಾಪ್ತಿಯಲ್ಲಿನ ರಾಜಕಾಲುವೆಗಳ ಕಾಮಗಾರಿ ಕೆಲಸಗಳ ನಿರ್ವಹಣೆಯಾಗುತ್ತಿರುವ ಬಗ್ಗೆ ಫೋಟೋಗಳನ್ನು ಗ್ರೂಪ್‌ಗೆ ಹಾಕುವಂತೆ ತಿಳಿಸಲಾಯಿತು.

**5) ವಾರ್ಡ್ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ದುರಸ್ಥಿ ಬಗ್ಗೆ ಚರ್ಚಿಸಿದ ವಿಚಾರಗಳು.**

1. ಬೀದಿ ದೀಪಗಳಿಗೆ ಸಂಬಂಧಪಟ್ಟ ಗುತ್ತಿಗೆದಾರರು ರಾತ್ರಿ ಸಮಯ ವಾರ್ಡ್ ಅನ್ನು ಸಂಚರಿಸಿ ಬೀದಿ ದೀಪಗಳ ದುರಸ್ಥಿ ಬಗ್ಗೆ ಪರಿಶೀಲಿಸಿ ಅತೀ ಜರೂರಾಗಿ ದುರಸ್ಥಿ ಕೆಲಸವನ್ನು ಮಾಡಬೇಕಾಗಿ ಹಿಂದಿನ ಸಭೆಯಲ್ಲಿ ತಿಳಿಸಿದ್ದು, ಅದನ್ನು ಸರಿಯಾಗಿ ನಿರ್ವಹಿಸುತ್ತಿರುವ ಬಗ್ಗೆ ಚೇತನ್ ಎಲೆಕ್ಟ್ರಿಕಲ್ ಗುತ್ತಿಗೆದಾರರು ಸಭೆಯಲ್ಲಿ ತಿಳಿಸಿದರು.

2 ವಾರ್ಡ್ ವ್ಯಾಪ್ತಿಯಲ್ಲಿ ತುರ್ತಾಗಿ ಹೊಸ ಬೀದಿ ದೀಪಗಳ ಅವಶ್ಯಕತೆ ಇರುವ ಕಡೆ ಅತೀ ಜರೂರಾಗಿ ಅಳವಡಿಸಲು ಸೂಚಿಸಲಾಯಿತು.

**6) ವಾರ್ಡ್ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಲಾದ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ ನೆಟ್ಟಿರುವ ಹೊಸ ಗಿಡಗಳ ಸಂರಕ್ಷಣೆಯನ್ನು ಒಂದು ವರುಷಗಳ ಕಾಲ ಸರಿಯಾಗಿ ನಿರ್ವಹಣೆ ಮಾಡುವಂತೆ ಅರಣ್ಯ ಇಲಾಖೆಯ ಅಧಿಕಾರಿಯವರಿಗೆ ಸೂಚಿಸಿದರು.

**7) ವಾರ್ಡ್ ವ್ಯಾಪ್ತಿಯಲ್ಲಿನ ಕೋವಿಡ್ ನಿಯಂತ್ರಣ ಬಗ್ಗೆ ಚರ್ಚಿಸಲಾದ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯಲ್ಲಿ ದಿನಾಂಕ:16.10.2020 ರವರೆಗೆ 1267 ಕೋವಿಡ್ ಕೇಸ್‌ಗಳಿದ್ದು, ಅದರಲ್ಲಿ 807 ಜನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದು, 425 ಜನರಿಗೆ ಕೋವಿಡ್ ಪಾಸಿಟಿವ್ ಇದ್ದು, 225 ಜನ ಹೋಮ್ ಐಸೋಲೇಷನ್‌ನಲ್ಲಿದ್ದು, 200 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಮತ್ತು 35 ಜನರು ಮರಣ ಹೊಂದಿರುತ್ತಾರೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು ಅದಕ್ಕೆ ನೋಡಲ್ ಅಧಿಕಾರಿಯವರು ಎಷ್ಟು ಜನರು ಐ.ಸಿ.ಯು ನಲ್ಲಿ ಇರುವ ಬಗ್ಗೆ ಹಾಗೂ ಅವರ ಆರೋಗ್ಯದ ಬಗ್ಗೆ ಮಾಹಿತಿ ಕಲೆಹಾಕುವಂತೆ ಸದರಿ ಅಧಿಕಾರಿಯವರಿಗೆ ಸೂಚಿಸಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಮಾಸ್ಕ್ ಧರಿಸದೆ ಓಡಾಡುವ ಜನರಿಗೆ ಮಾರ್ಷಲ್‌ಗಳ ಮತ್ತು ಪೊಲೀಸರ ಸಹಾಯದೊಂದಿಗೆ ದಂಡವನ್ನು ವಿಧಿಸುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.
3. ವಾರ್ಡ್ ವ್ಯಾಪ್ತಿಯಲ್ಲಿನ ಕೋವಿಡ್ ಟೆಸ್ಟಿಂಗ್ ಕ್ಯಾಂಪ್‌ಗಳನ್ನು ಮಾಡಿ ಜನರಿಗೆ ಹರಿವು ಮೂಡಿಸಲು ಸೂಚಿಸಲಾಯಿತು.
4. ವಾರ್ಡ್ ವ್ಯಾಪ್ತಿಯಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ವಿಟಮಿನ್ 'ಸಿ' ಮಾತ್ರೆಗಳನ್ನು ತೆಗೆದು ಕೊಳ್ಳಲು ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಹಾಗೂ ಸಾಧ್ಯವಾದರೆ ಉಚಿತವಾಗಿ ಮಾತ್ರೆಗಳನ್ನು ನೀಡುವಂತೆ ಸೂಚಿಸಿದರು.
5. ವಾರ್ಡ್ ವ್ಯಾಪ್ತಿಯಲ್ಲಿನ ಕೋವಿಡ್ ಕೇಸ್‌ಗಳ ಬಗ್ಗೆ ಗ್ರಾಫ್ ತಯಾರಿಸುವಂತೆ ತಿಳಿಸಲಾಯಿತು.
6. ವಾರ್ಡ್ ವ್ಯಾಪ್ತಿಯಲ್ಲಿ ಮಾಸ್ಕ ಅನ್ನು ಧರಿಸದೆ ದಂಡವನ್ನು ಕಟ್ಟುವವರಿಗೆ ಉಚಿತವಾಗಿ ಮಾಸ್ಕ್ ನೀಡಿ ಜಾಗೃತಿ ಮೂಡಿಸುವಂತೆ ಸೂಚಿಸಿದರು.
7. ಚಳಿಗಾಲದಲ್ಲಿ ಸೊಳ್ಳೆಗಳು ಹೆಚ್ಚಾಗುವ ಸಾಧ್ಯತೆ ಇದ್ದು, ಡೆಂಘ್ಯೂ ಮತ್ತು ಮಲೇರಿಯಾದಂತ ಖಾಯಿಲೆಗಳು ಬರದಂತೆ ಸೊಳ್ಳೆ ನಿಯಂತ್ರಣ ಔಷಧಿ ಸಿಂಪಡಿಸುವಂತೆ ಸೂಚಿಸಿದರು.

**8) ವಾರ್ಡ್ ವ್ಯಾಪ್ತಿಯಲ್ಲಿ ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ಬೀಟ್ ಕೇಂದ್ರಗಳಿವೆ ಎಂದು ಮುಂದಿನ ಸಭೆಯಲ್ಲಿ ಪಟ್ಟಿಯನ್ನು ನೀಡಬೇಕಾಗಿ ತಿಳಿಸಿದರು.
2. ವಾರ್ಡ್ ವ್ಯಾಪ್ತಿ ಎಲ್ಲಲ್ಲಿ ಸಿ.ಸಿ ಕ್ಯಾಮರಾಗಳ ಅಳವಡಿಕೆ ಹೆಚ್ಚಾಗಿ ಇದೆ ಎನ್ನುವ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಯಿತು.

**9) ವಾರ್ಡ್ ವ್ಯಾಪ್ತಿಯಲ್ಲಿನ ಪ್ಲಾಂಟ್‌ನ ಬಗ್ಗೆ ಚರ್ಚಿಸಲಾದ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯಲ್ಲಿನ ಪ್ಲಾಂಟ್‌ಗಳಲ್ಲಿ ಲಿಟೆಟ್‌ನಿಂದ ತುಂಬ ವಾಸನೆ ಬರುತ್ತಿದ್ದು, ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು, ವಾಸನೆ ಬರದಂತೆ ಸರಿಯಾದ ಕ್ರಮವಹಿಸಬೇಕಾಗಿ ಈ ಸಭೆಯಲ್ಲಿಯೂ ಸೂಚಿಸಲಾಯಿತು.
2. ಪ್ಲಾಂಟ್‌ನ ಸುತ್ತು-ಮುತ್ತ ನೊಣಗಳು ಬರದಂತೆ ಔಷಧಿ ಸಿಂಪಡಿಸಲು ಸೂಚಿಸಲಾಯಿತು.

**10) ವಾರ್ಡ್ ವ್ಯಾಪ್ತಿಯಲ್ಲಿನ ಕೆರೆಗಳ ಬಗ್ಗೆ ಚರ್ಚಿಸಲಾದ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯ ಅಂದ್ರಹಳ್ಳಿ ಕೆರೆಯ ಆವರಣದಲ್ಲಿ ಒಳಚರಂಡಿ ಕೊಳವೆ ಮಾರ್ಗಕ್ಕೆ ಅನುಮತಿ ನೀಡುವಂತೆ ಸೂಚಿಸಲಾಯಿತು.

**11) ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಚರ್ಚಿಸಲಾದ ವಿಚಾರಗಳು.**

1. ವಾರ್ಡ್ ವ್ಯಾಪ್ತಿಯ ಮಾರಣ್ಣ ಬಡಾವಣೆಯಲ್ಲಿ ಸ್ಮಶಾನ ಜಾಗದ ಕೊರತೆ ಇದ್ದು, ಸರ್ಕಾರಿ ಸ್ಮಶಾನ ಜಾಗಗಳ ಬಗ್ಗೆ ಮಾಹಿತಿ ನೀಡುವುದರ ಬಗ್ಗೆ ಚರ್ಚಿಸಲಾಯಿತು.

12) ಒಂಟಿ ಮನೆ ಬಗ್ಗೆ ಚರ್ಚಿಸಲಾದ ವಿಚಾರಗಳು.

1. ಈಗಾಗಲೇ 180 ಒಂಟಿ ಮನೆಗಳು ಜಾರಿಯಾಗಿದ್ದು, ಅದರಲ್ಲಿ ಕೆಲವರಿಗೆ ಮಾತ್ರ ಹಣ ಪಾವತಿಯಾಗಿದ್ದು, ಇನ್ನೂ ಕೆಲವರಿಗೆ ಬಾಕಿ ಇದ್ದು, ಇದನ್ನು ಪಟ್ಟಿ ಮಾಡಿ ನೀಡಬೇಕೆಂದು ಈ ಸಭೆಯಲ್ಲಿಯೂ ಸೂಚಿಸಲಾಯಿತು.

2. ಒಂಟಿ ಮನೆಗಳಿಗೆ ಸಂಬಂಧಿಸಿದಂತೆ ಸಹಾಯಕ ಹಣಕಾಸು ನಿಯಂತ್ರಕರು, ರಾ.ರಾ.ನಗರ ವಲಯ ಇವರನ್ನು ಮುಂದಿನ ಸಭಗೆ ಹಾಜರಾಗಲು ಸೂಚಿಸಿದರು.

ಮುಂಚಿತವಾಗಿ ಕಾರಣ ತಿಳಿಸದೆ ಸಭೆಗೆ ಗೈರು ಹಾಜರಾದವರಿಗೆ ನೋಟೀಸ್ ನೀಡುವಂತೆ ನೋಡಲ್ ಅಧಿಕಾರಿಯವರು ತಿಳಿಸಿದರು ಹಾಗೂ ಮುಂದಿನ ಸಭೆಗೆ ಕಲ್ಯಾಣ ಇಲಾಖೆಯವರು ಹಾಜರಾಗುವಂತೆ ಸೂಚಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.40, ದೊಡ್ಡಬಿದರಕಲ್ಲು

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.40, ದೊಡ್ಡಬಿದರಕಲ್ಲು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

ವಾರ್ಡ್ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರುಗಳ ಮಾಹಿತಿಗಾಗಿ.

1. ಶ್ರೀ.ದೊಡ್ಡಶಾನಯ್ಯ, ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ವಾರ್ಡ್ ನೋಡಲ್ ಅಧಿಕಾರಿಗಳು ರವರ ಮಾಹಿತಿಗಾಗಿ ಕಳುಹಿಸಿದೆ.
2. ಶ್ರೀ.ಕೂರ್ಲಪ್ಪ, ತಿಗಳರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
3. ಶ್ರೀ.ಸತೀಶ್, ಜಿ.ಹೊಸಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
4. ಶ್ರೀ.ಮಂಜುನಾಥ್, ಚನ್ನನಾಯಕನಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
5. ಶ್ರೀ.ಮುನಿನಾರಾಯಣಪ್ಪ, ಇಂದಿರಾನಗರ ರವರ ಮಾಹಿತಿಗಾಗಿ ಕಳುಹಿಸಿದೆ.
6. ಶ್ರೀ.ನಟರಾಜ್, ವಿದ್ಯಾಮಾನ್ಯ ನಗರ ವೆಸ್ಟ್ ರವರ ಮಾಹಿತಿಗಾಗಿ ಕಳುಹಿಸಿದೆ.
7. ಶ್ರೀ.ಗರುಡಪ್ಪ, ತಿಳಗರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
8. ಶ್ರೀ.ಮಾಲಾತೇಶ್, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
9. ಶ್ರೀಮತಿ.ಮಂಗಳಮ್ಮ, ಮಾರಣ್ಣ ಲೇಔಟ್, ರವರ ಮಾಹಿತಿಗಾಗಿ ಕಳುಹಿಸಿದೆ.
10. ಶ್ರೀಮತಿ.ಸುಮಿತ್ರ, ಅಂದ್ರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ಶ್ರೀಮತಿ.ಪುಟ್ಟಮ್ಮ, ತಿಗಳರಪಾಳ್ಯ ರವರ ಮಾಹಿತಿಗಾಗಿ ಕಳುಹಿಸಿದೆ.

ಅಧಿಕಾರಿಗಳ ಮಾಹಿತಿಗಾಗಿ

1. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
2. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
3. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಕೆಂ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರ ಮಾಹಿತಿಗಾಗಿ ಕಳುಹಿಸಿದೆ.